

ವಲಯಗಳಲ್ಲೊಂದು, ಅದಕ್ಕೆ ಧಕ್ಕೆ ತರುವ ಯಾವ ಕೆಲಸಕ್ಕೂ ನಾವು ಅವಕಾಶ ಕೊಡಕೂಡದು' ಎಂಬ ನಿರ್ಣಯ ಕೈಗೊಳ್ಳಲಾಯಿತು. ಜನ ಅನುಸರಿಸುತ್ತಿರುವ ಕೃಷಿಯಿಂದಲೂ ಅರಣ್ಯಗಳಿಗೆ ಧಕ್ಕೆಯಾಗುತ್ತಿದೆ ಮತ್ತು ಸರ್ಕಾರ ನೀಲಗಿರಿ ನೆಡುತೋಪು ಬೆಳೆಸುವುದು ನೈಸರ್ಗಿಕ ಅರಣ್ಯಕ್ಕೆ ಕುತ್ತು ತರುತ್ತದೆ ಎಂಬ ವಿಚಾರ ಬಂತು. ಶಿವರಾಮ ಕಾರಂತ, ವಂದನಾಶಿವ, ರವಿ ಶರ್ಮಾ, ಕುಸುಮಾ ಸೊರಬ, ಮಂಜುನಾಥ ಹೊಸ್ತೋಟ, ಜಯಂತ ಬಂದೋಪಾಧ್ಯಾಯ, ಸ್ವರ್ಣವಲ್ಲಿ ಮಠದ ಸ್ವಾಮಿಗಳು, ಪುಣೆಯ ವಿಜಯ ಪರಾಂಜಪೆ, ಶಿರಸಿಯ ಪದವಿ ಕಾಲೇಜಿನ ಪ್ರಾಚಾರ್ಯರಾದ ಲಿಂಗೇಶ್ ಶರ್ಮಾ, ಕೆ.ಎಂ. ಹೆಗಡೆ ಇವರೆಲ್ಲರ ಚರ್ಚೆ–ಮಾತು–ತಿರುಗಾಟ, ಭಾಷಣ, ಬರಹಗಳು ಹೋರಾಡುತ್ತಿದ್ದ ಜನರಿಗೆ ಹೊಸ ಹುಮ್ಮಸ್ಸು ನೀಡಿದವು. ಸರ್ಕಾರ ಬೇಡ್ತಿ ಅಣೆಕಟ್ಟನ್ನು ನಿರ್ಮಿಸುವುದೋ, ಬಿಡುವುದೋ ಎಂದು ಜಿಜ್ಞಾಸೆಗೆ ಬಿದ್ದು ತಜ್ಞ ಸಮಿತಿಯೊಂದನ್ನು ರಚಿಸಿ ವರದಿ ಕೇಳಿತು.

ಬೇಡ್ತಿ ಅಣೆಕಟ್ಟಿನಿಂದಾಗಿ 60 ಹಳ್ಳಿಗಳು ಮುಳುಗಡೆಯಾಗುತ್ತಿದ್ದವು ಮತ್ತು ಸಾಂಬಾರ ಪದಾರ್ಥಗಳ ಕಣಜವೆನಿಸಿದ್ದ ಸಾವಿರಾರು ಎಕರೆ ಕೃಷಿಭೂಮಿ ಮುಳುಗುತ್ತಿತ್ತು. ಇದನ್ನು ವಿರೋಧಿಸಿದ ಸ್ಥಳೀಯ ಶಾಸಕಿ ಅನಸೂಯ ಶರ್ಮ ಸ್ಥಳೀಯ ಪ್ರತಿನಿಧಿಗಳೊಂದಿಗೆ ಅಂದಿನ ಮುಖ್ಯಮಂತ್ರಿ ದೇವರಾಜು ಅರಸರನ್ನು ಭೇಟಿ ಮಾಡಿದರು. ಚುನಾವಣಾ ಟಿಕೆಟ್ ಹಂಚಿಕೆಯಲ್ಲಿ ನಿರತರಾಗಿದ್ದ ಅರಸು, 'ಚುನಾವಣೆ ಮುಗಿದ ನಂತರ ಭೇಟಿಮಾಡಿ' ಎಂದರು. ಅದರಿಂದ ತೃಪ್ತರಾಗದ ಅನಸೂಯ ಮತ್ತವರ ಅನಯಾಯಿಗಳು, 'ನಿಮ್ಮ ಉತ್ತರ ನಮಗೆ ಸಮಾಧಾನ ನೀಡಿಲ್ಲ, ದಯಮಾಡಿ ಈಗಲೇ ನಿರ್ಣಯ ಕೈಗೊಳ್ಳಿ. ಇಲ್ಲದಿದ್ದರೆ ಪರಿಸ್ಥಿತಿ ಕೈಮೀರುತ್ತದೆ' ಎಂದರು. ಆಗ ಅವರ ಬಳಿಯೇ ಕುಳಿತಿದ್ದ ಕೇಂದ್ರ ರೈಲ್ವೆ ಸಚಿವ ಟಿ.ಎ. ಪೈ ಅವರು, 'ಸದರಿ ಯೋಜನೆಯಿಂದ ಅರಣ್ಯನಾಶ ಖಂಡಿತ, ರೈತರ ಭಯ ನೈಜವಾದುದು' ಎಂದರು. ಆಗ ಅರಸು, ಮುಖ್ಯ ಕಾರ್ಯದರ್ಶಿಯ ಮೂಲಕ ಯೋಜನೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲು ಆಜ್ಞೆ ನೀಡಿದರು, ಬೇಡ್ತಿ–ಅಘನಾಶಿನಿ ಯೋಜನೆಗೆ ನಿಲುಗಡೆ ಸಿಕ್ಕಿತ್ತಾದರೂ, ಕಾಳಿ ಯೋಜನೆ ಮುಂದುವರೆಯುವುದು ಎಂದಾಗಿತ್ತು.

ಅರಸು ಚುನಾವಣೆಯಲ್ಲಿ ಸೋತರು. ಗುಂಡೂರಾವ್ ಅಧಿಕಾರಕ್ಕೆ ಬಂದರು. ಅನಸೂಯ ಮತ್ತು ತಂಡ ಮುಖ್ಯಮಂತ್ರಿಯನ್ನು ಭೇಟಿಯಾಗಿ ಹಳೆಯ ನಿರ್ಣಯ ತೋರಿಸಿ ಹೊಸ ಮನವಿ ಸಲ್ಲಿಸಿದರು. 1980ರ ಮೇ 13ರಂದು ಯೋಜನೆಯ ಸ್ಥಳಕ್ಕೆ ಭೇಟಿ ನೀಡಿದ ಗುಂಡೂರಾವ್ ವೈಮಾನಿಕ ಸಮೀಕ್ಷೆ ನಡೆಸಿದರು. ಸಮಿತಿ ರಚಿಸಿ ವರದಿ ಕೇಳಿದರು. ಗುಂಡೂರಾಯರ ಅವಧಿ ಮುಗಿದು, ಉತ್ತರ ಕನ್ನಡದವರೇ ಆಗಿದ್ದ ರಾಮಕೃಷ್ಣ ಹೆಗಡೆಯವರು ಜನತಾ ಪಕ್ಷ ಸರ್ಕಾರದ ಮುಖ್ಯಮಂತ್ರಿಯಾದರು. ಯೋಜನೆಯ ಹಲವು ಪರಿಷ್ಕೃತ ವರದಿಗಳು ರೂಪುಗೊಂಡವೇ ಹೊರತು ಯೋಜನೆ ನಿರಂತರ ನನೆಗುದಿಗೆ ಬಿತ್ತು. ಹೆಗಡೆ ಜಾಗಕ್ಕೆ ದೇವೇಗೌಡ, ಬಂಗಾರಪ್ಪ, ವೀರಪ್ಪ ಮೊಯಿಲಿ ಬಂದರು. ಬೇಡ್ತಿ ಯಾರಿಗೂ ಬೇಡದ ಯೋಜನೆಯಂತಾಯಿತು. ಇಂದಿಗೂ ಬೇಡ್ತಿ ಯೋಜನೆ ಮುಗಿದಿಲ್ಲ. ಸಿಗಬೇಕಾದ ಯಾವ ಪ್ರಯೋಜನವೂ ಯಾರಿಗೂ ದಕ್ಕಿಲ್ಲ. ಹತ್ತು ವರ್ಷಗಳ ಹಿಂದೆ ವರದಾ ಮತ್ತು